

بسم اللهِ الرّحمٰن الرّحيم

# ಹಝ್ರತ್ ಅಲಿ(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11-12-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಉಹದ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಮುಸ್‌ಅಬ್ ಶಹೀದ್ ಆದಾಗ, ಹಝ್ರತ್ ಪೈಗಂಬರ್(ಸ) ಧ್ವಜವನ್ನು ಹಝ್ರತ್ ಅಲಿಯವರಿಗೆ ಒಪ್ಪಿಸಿದರು. ಹೀಗೆ ಹಝ್ರತ್ ಅಲಿ(ರ) ಮತ್ತು ಇತರ ಮುಸ್ಲಿಮರು ಹೋರಾಡಿದರು.

ಒಂದು ವರದಿಯ ಪ್ರಕಾರ, ಉಹದ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಅಲಿಯವರನ್ನು ಸತ್ಯನಿಷೇಧಿಗಳ ಧ್ವಜವಾಹಕನಾದ ತಲ್‌ಹ ಬಿನ್ ಅಬೂತಲ್‌ಹ ಹೋರಾಡಲು ಆಹ್ವಾನಿಸಿದನು. ಹಝ್ರತ್ ಅಲಿ(ರ) ಮುಂದಕ್ಕೆ ಧಾವಿಸಿಕೊಂಡು ಆಕ್ರಮಣ ನಡೆಸಿದಾಗ, ಅವನು ನೆಲಕ್ಕೆ ಬಿದ್ದು ನರಳುತ್ತಾ ಪ್ರಾಣ ಬಿಟ್ಟನು. ಸತ್ಯನಿಷೇಧಿಗಳ ಧ್ವಜವಾಹಕರನ್ನು ಒಬ್ಬರ ನಂತರ ಇನ್ನೊಬ್ಬರಂತೆ ಹಝ್ರತ್ ಅಲಿ(ರ) ಖಡ್ಗದಿಂದ ಹಲ್ಲೆ ನಡೆಸಿ ಕೊಂದು ಹಾಕಿದರು ಮತ್ತು ಅವರನ್ನು ಚದುರಿಸಿದರು. ಶೈಬ ಬಿನ್ ಮಾಲಿಕ್‌ನನ್ನು ಹಝ್ರತ್ ಅಲಿ(ರ) ಕೊಂದು ಹಾಕಿದಾಗ, ಹಝ್ರತ್ ಜಿಬ್ರೀಲ್(ಅ) ಹೇಳಿದರು: ಯಾ ರಸೂಲಲ್ಲಾಹ್, ಖಂಡಿತವಾಗಿಯೂ ಹಝ್ರತ್ ಅಲಿ(ರ) ಸಹಾನುಭೂತಿಗೆ ಅರ್ಹರಾಗಿದ್ದಾರೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲಿ ನನ್ನಿಂದ ಮತ್ತು ನಾನು ಅಲಿಯಿಂದ. ಆಗ ಹಝ್ರತ್ ಜಿಬ್ರೀಲ್(ಅ) ಹೇಳಿದರು: ನಾನು ನಿಮ್ಮಿಬ್ಬರಿಂದ ಆಗಿರುವೆನು.

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಬಳಿಯಿಂದ ಜನರು ದೂರ ಸರಿದಾಗ, ನಾನು ಶಹೀದರ ಮೃತದೇಹಗಳನ್ನು ಪರಿಶೀಲಿಸಲು ಶುರುಮಾಡಿದೆ. ಅವುಗಳಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಕಾಣಲಿಲ್ಲ. ಆಗ ನಾನು ಹೇಳಿದೆ: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಓಡಿ ಪರಾರಿಯಾಗುವ ವ್ಯಕ್ತಿಯಲ್ಲ. ಅವರನ್ನು ನಾನು ಹುತಾತ್ಮರಲ್ಲೂ ಕಾಣಲಿಲ್ಲ. ಆದರೆ ಅಲ್ಲಾಹನು ನಮ್ಮೊಡನೆ ಕೋಪಗೊಂಡಿದ್ದಾನೆ. ಆದ್ದರಿಂದ ಅವನು ತನ್ನ ಪ್ರವಾದಿಯನ್ನು ಮೇಲಕ್ಕೆ ಎತ್ತಿದ್ದಾನೆ. ಆದ್ದರಿಂದ ಕೊಲ್ಲಲ್ಪಡುವ ತನಕ ಹೋರಾಡುವುದೇ ನನಗೆ ಉತ್ತಮ. ಅನಂತರ ನಾನು ನನ್ನ ಖಡ್ಗದ ಕವಚವನ್ನು ತುಂಡುಮಾಡಿದೆ ಮತ್ತು ಸತ್ಯನಿಷೇಧಿಗಳ ಮೇಲೆ ಆಕ್ರಮಣ ನಡೆಸಿದೆ. ಅವರೆಲ್ಲರೂ ಚದುರಿದರು. ಆಗ ಹಝ್ರತ್ ಪೈಗಂಬರ್(ಸ) ಅವರ ನಡುವೆ ಇರುವುದಾಗಿ ನಾನು ಕಂಡೆನು. (ಹುಝೂರ್ ಹೇಳಿದರು:) ಇದು ಪ್ರೀತಿ ಮತ್ತು ಪ್ರೇಮದ ದೀರ್ಘ ವೃತ್ತಾಂತವಾಗಿದೆ. ಅದು ಅವರಿಬ್ಬರ ನಡುವೆ ಬಾಲ್ಯಕಾಲದಿಂದ ಶುರುವಾಗಿ, ಪ್ರತಿಯೊಂದು ಸಂದರ್ಭದಲ್ಲೂ ತನ್ನ ವೈಭವವನ್ನು ತೋರಿಸುತ್ತಾ ಇತ್ತು.

ಹಝ್ರತ್ ಸಹಲ್ ಬಿನ್ ಸಅದ್ ವರದಿ ಮಾಡುತ್ತಾರೆ: ಉಹದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಗಾಯಗೊಂಡಾಗ ಹಝ್ರತ್ ಫಾತಿಮ ಗಾಯವನ್ನು ತೊಳೆಯುತ್ತಿದ್ದರು ಮತ್ತು ಹಝ್ರತ್ ಅಲಿ(ರ) ಗುರಾಣಿಯಿಂದ ನೀರು ಹಾಕುತ್ತಿದ್ದರು. ಉಹದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಅಲಿ(ರ) ಪ್ರಕಟಿಸಿದ ಶೌರ್ಯದ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಅಮ್ರ್ ಒಬ್ಬ ಅತ್ಯಂತ ಹೆಸರುವಾಸಿಯಾದ ಖಡ್ಗಧಾರಿಯಾಗಿದ್ದನು. ತನ್ನ ಶೌರ್ಯದ ಕಾರಣದಿಂದ ಒಂದು ಸಾವಿರ ಸೈನಿಕರಿಗೆ ಸಮಾನನೆಂದು ಅವನ ಬಗ್ಗೆ ಭಾವಿಸಲಾಗುತ್ತಿತ್ತು. ಅವನು ಯುದ್ಧ ಮೈದಾನಕ್ಕೆ ಬಂದ ಕೂಡಲೇ ಅತ್ಯಂತ ಅಹಂಕಾರದ ಶೈಲಿಯಲ್ಲಿ ಮುಸ್ಲಿಮರನ್ನು ಯುದ್ಧ ಮಾಡಲು ಆಹ್ವಾನಿಸಿದನು. ಹಝ್ರತ್ ಪೈಗಂಬರ್(ಸ)ರ ಅನುಮತಿಯಿಂದ ಹಝ್ರತ್ ಅಲಿ(ರ) ಅವನ ವಿರುದ್ಧ ಹೋರಾಡಲು ಮುಂದಕ್ಕೆ ಧಾವಿಸಿದರು. ಹಝ್ರತ್ ಪೈಗಂಬರ್(ಸ) ತನ್ನ ಖಡ್ಗವನ್ನು ಅವರಿಗೆ ಕೊಟ್ಟರು. ಅವರಿಗಾಗಿ ದುಆ ಮಾಡಿದರು. ಹಝ್ರತ್ ಅಲಿ(ರ) ಮುಂದಕ್ಕೆ ಧಾವಿಸಿ ಅಮ್ರ್‌ನೊಡನೆ ಹೇಳಿದರು: ಖುರೈಶಿಯರಲ್ಲಿ ಯಾರಾದರೂ ಎರಡು ಸಂಗತಿಗಳನ್ನು ಮಾಡಲು ವಿನಂತಿಸಿದರೆ, ಅವುಗಳಲ್ಲಿ ಒಂದನ್ನು ಖಂಡಿತ ಅಂಗೀಕರಿಸುತ್ತೀಯ ಎಂದು ನೀನು ಪ್ರತಿಜ್ಞೆ ಮಾಡಿದ್ದಾಗಿ ನಾನು ಕೇಳಿದ್ದೇನೆ. ಹೌದೆಂದು ಅಮ್ರ್ ಹೇಳಿದನು. ಆಗ ಹಝ್ರತ್ ಅಲಿ(ರ) ಹೇಳಿದರು: ಹಾಗಾದರೆ, ನಾನು ನಿನ್ನೊಡನೆ ಹೇಳುವ ಮೊದಲ ಸಂಗತಿಯೇನೆಂದರೆ, ನೀನು ಮುಸ್ಲಿಮನಾಗು ಮತ್ತು ಹಝ್ರತ್ ಪೈಗಂಬರರನ್ನು(ಸ) ನಂಬಿಕೊಂಡು ದೈವಿಕ ಅನುಗ್ರಹಗಳ ವಾರಸುದಾರನಾಗು. ಅಮ್ರ್ ಹೇಳಿದನು: ಇದು ಸಾಧ್ಯವಲ್ಲ. ಹಝ್ರತ್ ಅಲಿ(ರ) ಹೇಳಿದರು: ಇದನ್ನು ಅಂಗೀಕರಿಸಲು ನಿನಗೆ ಸಾಧ್ಯವಿಲ್ಲವೆಂದಾದರೆ, ಬಾ, ನನ್ನೊಡನೆ ಕಾದಾಡಲು ತಯಾರಾಗು. ಇದನ್ನು ಕೇಳಿ ಅಮ್ರ್ ನಗಲು ಶುರುಮಾಡಿದನು ಮತ್ತು ಹೀಗೆ ಹೇಳಿದನು: ನನ್ನೊಡನೆ ಹೀಗೆ ಹೇಳಲು ಯಾರಿಗಾದರೂ ಸಾಧ್ಯವೆಂದು ನನಗೆ ತೋರುವುದಿಲ್ಲ. ನೀನೀಗ ಇನ್ನೂ ಚಿಕ್ಕವನು. ನಾನು ನಿನ್ನ ರಕ್ತವನ್ನು ಸುರಿಸಲು ಬಯಸುವುದಿಲ್ಲ. ನಿಮ್ಮಲ್ಲಿ ದೊಡ್ಡವರಾದ ಯಾರನ್ನಾದರೂ ಕಳುಹಿಸು. ಹಝ್ರತ್ ಅಲಿ(ರ) ಇದಕ್ಕೆ ಉತ್ತರವಾಗಿ ಹೇಳಿದರು: ನೀನು ನನ್ನ ರಕ್ತವನ್ನು ಹರಿಯಲು ಬಯಸುವುದಿಲ್ಲವಾದರೂ ನನಗೆ ನಿನ್ನ ರಕ್ತವನ್ನು ಹರಿಸಲು ಹಿಂಜರಿಕೆಯಿಲ್ಲ. ಇದನ್ನು ಕೇಳಿದಾಗ, ಅಮ್ರ್ ಆವೇಶದಿಂದ ಅಂಧನಾಗಿ ತನ್ನ ಕುದುರೆಯಿಂದ ಕೆಳಗೆ ಜಿಗಿದನು. ಅನಂತರ

ಬೆಂಕಿಯ ಜ್ವಾಲೆಯ ರೂಪದಲ್ಲಿ, ಹುಚ್ಚನಂತೆ ಹಝ್ರತ್ ಅಲಿಯ(ರ) ಕಡೆಗೆ ಧಾವಿಸಿದನು ಮತ್ತು ಹಝ್ರತ್ ಅಲಿಯ ಮೇಲೆ ಶಕ್ತವಾಗಿ ಖಡ್ಗದಿಂದ ಹಲ್ಲೆ ನಡೆಸಿದನು. ಅದು ಹಝ್ರತ್ ಅಲಿಯ(ರ) ಗುರಾಣಿಯನ್ನು ತುಂಡರಿಸುತ್ತಾ ಅವರ ಹಣೆಗೆ ತಗುಲಿತು ಮತ್ತು ಅಲ್ಪವಾಗಿ ಗಾಯಗೊಳಿಸಿತು. ಆದರೆ ಹಝ್ರತ್ ಅಲಿ(ರ) ಅದೇ ಕ್ಷಣದಲ್ಲಿ, ಅಲ್ಲಾಹು ಅಕ್ಬರ್ ಎಂದು ಘೋಷಿಸುತ್ತಾ ಅವನ ಮೇಲೆ ಹಲ್ಲೆ ನಡೆಸಿದಾಗ, ತನ್ನನ್ನು ರಕ್ಷಿಸಿಕೊಳ್ಳಲು ಅವನಿಂದ ಸಾಧ್ಯವಾಗಲಿಲ್ಲ. ಹಝ್ರತ್ ಅಲಿಯ ಖಡ್ಗ ಅವನ ಭುಜಗಳನ್ನು ಮುರಿಯುತ್ತಾ ಕೆಳಗೆ ಇಳಿಯಿತು. ಹೀಗೆ ಅಮ್ರ್ ನಡುಗುತ್ತಾ ಜೀವತೆತ್ತನು.

ಹುದೈಬಿಯಾ ಸಂಧಿಯ ಸಂದರ್ಭದಲ್ಲಿ, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಒಪ್ಪಂದ ಬರೆಯಲು ನಿಶ್ಚಯಿಸಲಾಗಿತ್ತು. ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅವರ ಸಂಗಡಿಗರು ಹಾಗೂ ಮಕ್ಕಾ ನಿವಾಸಿಯರ ನಡುವೆ ಈ ಒಪ್ಪಂದವನ್ನು ಮಾಡಲಾಗುತ್ತಿದೆ ಎಂದು ಅವರು ಬರೆದರು. ಇದರಿಂದ ಸತ್ಯನಿಷೇಧಿಗಳು ಕೋಪಗೊಂಡರು. ಅವರು ಹೇಳಿದರು: ಈ ಪದಗಳನ್ನು ನಮಗೆ ಸಹಿಸಲು ಸಾಧ್ಯವಲ್ಲ. ಏಕೆಂದರೆ, ನಾವು ಮುಹಮ್ಮದರನ್ನು ರಸೂಲುಲ್ಲಾಹ್ ಎಂದು ಅಂಗೀಕರಿಸುವುದಿಲ್ಲ. ಅಂಗೀಕರಿಸುವುದಾದರೆ, ನಾವು ಅವರೊಡನೆ ಯುದ್ಧವನ್ನೇಕೆ ಮಾಡಬೇಕು? ಹಝ್ರತ್ ಪೈಗಂಬರ್(ಸ) ಹೇಳಿದರು: ಇವರು ಸರಿಯಾಗಿ ಹೇಳುತ್ತಿದ್ದಾರೆ. ಒಪ್ಪಂದದಿಂದ ರಸೂಲುಲ್ಲಾಹ್ ಎಂಬ ಪದವನ್ನು ಅಳಿಸಬೇಕು. ಆ ಪದವನ್ನು ಅಳಿಸಲು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು. ಆದರೆ, ಅನುಸರಣೆ ಮತ್ತು ವಿಧೇಯತೆಯ ಅತ್ಯಂತ ಉನ್ನತ ಮಾದರಿಯಾದ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಹೃದಯ ಕೂಡ ಇದರಿಂದ ನಡುಗಲು ಶುರುವಾಯಿತು. ಅವರ ಕಣ್ಣುಗಳಿಂದ ಕಣ್ಣೀರು ಬಂತು. ಅವರು ಹೇಳಿದರು: ಯಾ ರಸೂಲಲ್ಲಾಹ್, ನನಗೆ ಈ ಪದವನ್ನು ಅಳಿಸಲು ಸಾಧ್ಯವಾಗುತ್ತಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ತನ್ನಿರಿ, ನನಗೆ ಆ ಕಾಗದ ಪತ್ರವನ್ನು ಕೊಡಿರಿ. ಹಝ್ರತ್ ಪೈಗಂಬರ್(ಸ) ಕಾಗದವನ್ನು ಪಡೆದುಕೊಂಡು ರಸೂಲುಲ್ಲಾಹ್ ಎಂಬ ಪದವನ್ನು ತನ್ನ ಕೈಯಿಂದ ಅಳಿಸಿ ಹಾಕಿದರು.

ಖೈಬರ್ ಯುದ್ಧದ ಸಂದರ್ಭದಲ್ಲಿ, ಖೈಬರಿನ ಸರದಾರ ಮರ್ಹಬ್ ತನ್ನ ಖಡ್ಗವನ್ನು ಎತ್ತಿಹಿಡಿಯುತ್ತಾ ಧಾವಿಸಿದನು. ಅವನು ಹೇಳುತ್ತಿದ್ದನು: ನಾನು ಶಸ್ತ್ರಸಜ್ಜಿತ, ಶೂರ ಮತ್ತು ಅನುಭವಿಯಾದ ಮರ್ಹಬ್ ಆಗಿರುವೆನು ಎಂದು ಖೈಬರ್‌ಗೆ ಗೊತ್ತಿದೆ. ಆ ವೇಳೆಯಲ್ಲಿ ಹಝ್ರತ್ ಅಲಿ(ರ)ರಿಗೆ ಕಣ್ಣು ಬೇನೆಯಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು ಯಾರು ಪ್ರೀತಿಸುತ್ತಾರೋ ಹಾಗೂ ಅಲ್ಲಾಹನು ಮತ್ತು ಅವನ ಪ್ರವಾದಿ ಯಾರನ್ನು ಪ್ರೀತಿಸುತ್ತಾರೋ ಅವರಿಗೆ ನಾನು ಧ್ವಜವನ್ನು ಕೊಡುವೆನು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಗೆ ಧ್ವಜವನ್ನು ಕೊಟ್ಟರು. ಹಝ್ರತ್ ಪೈಗಂಬರ್(ಸ) ಅವರ ಕಣ್ಣುಗಳಿಗೆ ಲಾಲಾರಸವನ್ನು ಸವರಿದಾಗ ಅವುಗಳು ಶಮನಗೊಂಡವು. ಮರ್ಹಬ್ ಧಾವಿಸಿದನು. ನಾನು ಯುದ್ಧದ ಬೆಂಕಿ ಜ್ವಲಿಸುತ್ತಿರುವಾಗ ಶಸ್ತ್ರಸಜ್ಜಿತನಾಗಿ, ಶೌರ್ಯದಿಂದ ಹೋರಾಡುವ ಅನುಭವಿ ವ್ಯಕ್ತಿಯಾಗಿರುವ ಮರ್ಹಬ್ ಆಗಿರುವೆನು ಎಂದು ಖೈಬರ್‌ಗೆ ಗೊತ್ತಿದೆ ಎಂದು ಹೇಳುತ್ತಿದ್ದನು. ಹಝ್ರತ್ ಅಲಿ(ರ) ಹೇಳಿದರು: ನನ್ನ ತಾಯಿ ನನಗೆ ಹೈದರ್ ಎಂದು ಹೆಸರು ಇರಿಸಿದ್ದಳು. ಅದು ಭಯಾನಕ ರೂಪದ ಸಿಂಹದ ಹಾಗೆ ಕಾಡುಗಳಲ್ಲಿ ಇರುತ್ತದೆ. ಹಝ್ರತ್ ಅಲಿ(ರ) ಮರ್ಹಬ್‌ನ ತಲೆಗೆ ಹೊಡೆಯುತ್ತಾ ಅವನನ್ನು ಕೊಂದು ಹಾಕಿದರು. ಅನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಮೂಲಕ ಖೈಬರ್ ಮೇಲೆ ವಿಜಯ ಸಾಧಿಸಲಾಯಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಯುದ್ಧದಲ್ಲಿ, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಒಂದು ಮಾದರಿ ವಿಶ್ವಾಸವರ್ಧಕವಾದುದಾಗಿದೆ. ಒಬ್ಬ ಯಹೂದಿ ಸೇನಾಧಿಪತಿಯೊಡನೆ ಅವರ ಮುಖಾಮುಖಿಯಾಯಿತು. ಕೊನೆಗೆ ಹಝ್ರತ್ ಅಲಿ(ರ) ಅವನನ್ನು ನೆಲಕ್ಕೆ ಬೀಳಿಸಿದರು. ಅವನ ಎದೆಯ ಮೇಲೇರಿ ಕುಳಿತುಕೊಂಡರು ಮತ್ತು ಅವನನ್ನು ಕೊಲ್ಲಲ್ಲು ಉದ್ದೇಶಿಸಿದರು. ಅಷ್ಟರಲ್ಲಿ, ಅವನು ಹಝ್ರತ್ ಅಲಿಯರ ಮುಖದ ಮೇಲೆ ಉಗುಳಿದರು. ಆಗ ಹಝ್ರತ್ ಅಲಿ(ರ) ಅವನನ್ನು ಬಿಟ್ಟು ಬಿಟ್ಟರು. ಇದನ್ನು ನೋಡಿ ಯಹೂದಿ ಬಹಳ ಆಶ್ಚರ್ಯಚಕಿತನಾದನು. 'ನನ್ನನ್ನು ಬಿಟ್ಟು ಏಕೆ ದೂರ ಸರಿದಿರಿ' ಎಂದು ಹಝ್ರತ್ ಅಲಿಯೊಡನೆ ಅವನು ಕೇಳಿದನು. ಹಝ್ರತ್ ಅಲಿ(ರ) ಹೇಳಿದರು: 'ನಾನು ನಿನ್ನೊಡನೆ ಅಲ್ಲಾಹನ ಸಂಪ್ರೀತಿಗಾಗಿ ಹೋರಾಡುತ್ತಿದ್ದೆ. ಆದರೆ ನೀನು ನನ್ನ ಮುಖದ ಮೇಲೆ ಉಗುಳಿದಾಗ ನನಗೆ ಕೋಪಬಂತು. ಆಗ ನಾನು ನಿನ್ನನ್ನು ಕೊಂದರೆ, ಅದು ನನ್ನ ಸ್ವಾರ್ಥಕ್ಕಾಗಿ ಆಗಿರುವುದು, ಅಲ್ಲಾಹನಿಗಾಗಿ ಆಗಿರುವುದಿಲ್ಲವೆಂದು ನನಗೆ ಅನಿಸುತ್ತಿತ್ತು. ಆದ್ದರಿಂದ ನಾನು ನನ್ನ ಕೋಪವನ್ನು ತಣ್ಣಗಾಗಿಸಲು ಮತ್ತು ನಿನ್ನನ್ನು ಕೊಲ್ಲುವುದು ನನಗಾಗಿ ಆಗದಿರಲು ನಿನ್ನನ್ನು ಬಿಟ್ಟು ಬಿಟ್ಟೆ ಎಂದು ಹೇಳಿದರು.' ಇದು ಎಂತಹ ಮಹತ್ತಾದ ಶ್ರೇಷ್ಠತೆಯಾಗಿದೆ.

ಹುನೈನ್ ಯುದ್ಧ ಶವ್ವಾಲ್ ಹಿಜರೀ 8ರಲ್ಲಿ ನಡೆದಿತ್ತು. ಈ ಸಂದರ್ಭದಲ್ಲಿ ಮುಹಾಜಿರರ ಧ್ವಜ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಳಿಯಲ್ಲಿತ್ತು. ಘೋರವಾದ ಯುದ್ಧ ನಡೆದಾಗ, ಸತ್ಯನಿಷೇಧಿಗಳ ಕಠಿಣವಾದ ಆಕ್ರಮಣದ ಕಾರಣದಿಂದ ಹಝ್ರತ್ ಪೈಗಂಬರ್(ಸ)ರ ಕೆಲವೇ ಕೆಲವು ಸಹಾಬರು ಮಾತ್ರ ಅಲ್ಲಿ ಉಳಿದಿದ್ದರು. ಆ ಕೆಲವು ಸಹಾಬರಲ್ಲಿ ಹಝ್ರತ್ ಅಲಿ(ರ) ಇದ್ದರು.

ತಬೂಕ್ ಯುದ್ಧ ಹಿಜರೀ 9, ರಜಬ್ ತಿಂಗಳಲ್ಲಿ ನಡೆದಿತ್ತು. ಇದರ ಬಗ್ಗೆ ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ತಬೂಕಿಗೆ ಹೋಗಲು ಹೊರಟರು ಮತ್ತು ಹಝ್ರತ್ ಅಲಿಯವರನ್ನು ಮದೀನದಲ್ಲಿ ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ನೀವು ನನ್ನನ್ನು ಮಕ್ಕಳು ಮತ್ತು ಸ್ತ್ರೀಯರೊಂದಿಗೆ ಬಿಟ್ಟು ಹೋಗುತ್ತಿದ್ದೀರ ಎಂದು ಹಝ್ರತ್ ಅಲಿ(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹಾರೂನಿಗೆ ಮೂಸಾರೊಂದಿಗೆ ಇದ್ದ ಅದೇ ಸ್ಥಾನ ನಿನಗೆ ನನ್ನೊಡನೆ ಇದೆ ಎಂಬ ಕಾರಣದಿಂದ ನೀನು ಸಂತೋಷಗೊಳ್ಳುವುದಿಲ್ಲವೇ? ಆದರೆ

ನನ್ನ ಬಳಿಕ ನಬಿಯಿಲ್ಲ.

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಹಿಜರಿ 10ನೇ ವರ್ಷದಲ್ಲಿ ಹಝ್ರತ್ ಪೈಗಂಬರ್[ಸ] ಯಮನ್ ಕಡೆಗೆ ಕಳುಹಿಸಿದರು. ಹಝ್ರತ್ ಅಲಿ[ರ] ಯಮನ್ ನಿವಾಸಿಗಳಿಗೆ ಹಝ್ರತ್ ಪೈಗಂಬರ್[ಸ]ರ ಪತ್ರ ಓದಿ ಹೇಳಿದರು. ಆಗ ಹಮ್‌ದಾನಿನ ಎಲ್ಲರೂ ಒಂದೇ ದಿನದಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಅನಂತರ ಯಮನಿನ ನಿವಾಸಿಗಳು ಸಹ ಇಸ್ಲಾಂ ಧರ್ಮ ಸ್ವೀಕರಿಸಿದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಯಮನಿನ ಖಾಝಿಯನ್ನಾಗಿ ಮಾಡಿದರು. ಹಝ್ರತ್ ಪೈಗಂಬರ್[ಸ] ಹೇಳಿದರು: ನಿಶ್ಚಯವಾಗಿಯೂ ಅಲ್ಲಾಹನು ನಿನ್ನ ಹೃದಯವನ್ನು ನೇರವಾದ ಮಾರ್ಗದಲ್ಲಿ ನಡೆಸುವನು. ನಿನ್ನ ನಾಲಗೆಯನ್ನು ಸ್ಥಿರಗೊಳಿಸುವನು. ಆದ್ದರಿಂದ ಜಗಳಾಡುವ ಇಬ್ಬರು ನಿನ್ನ ಮುಂದೆ ಕುಳಿತುಕೊಂಡರೆ, ಮೊದಲ ವ್ಯಕ್ತಿಯಿಂದ ಆಲಿಸಿದ ಹಾಗೆಯೇ ಎರಡನೇ ವ್ಯಕ್ತಿಯಿಂದಲೂ ಆಲಿಸುವ ವರೆಗೆ ನೀನು ತೀರ್ಮಾನ ಮಾಡಬೇಡ. ಇದರಿಂದ ನಿನಗೆ ಸರಿಯಾಗಿ ತೀರ್ಮಾನ ಮಾಡಲು ಸಾಧ್ಯವಾಗುವುದು. ಹಝ್ರತ್ ಅಲಿ[ರ] ಹೇಳುತ್ತಾರೆ: ಇದರ ನಂತರ ನಾನು ತೀರ್ಮಾನ ಮಾಡುವಾಗ ಎಂದಿಗೂ ನಾನು ಸಂಶಯಕ್ಕೆ ಒಳಪಡಲಿಲ್ಲ.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್[ಸ] ಹೇಳಿದರು: ಯಾರು ಅಲಿಗೆ ತೊಂದರೆ ಕೊಡುತ್ತಾನೋ ಅವನು ನನಗೆ ತೊಂದರೆ ಕೊಡುತ್ತಾನೆ. ಹಝ್ರತ್ ಪೈಗಂಬರ್[ಸ] ಹೇಳಿದರು: ಎಲೈ ಜನರೇ, ನೀವು ಅಲಿಯ ಬಗ್ಗೆ ದೂರು ನೀಡಬೇಡಿರಿ. ಅಲ್ಲಾಹನಾಣೆ, ಅವರು ಅಲ್ಲಾಹನ ಮೇಲೆ ಬಹಳ ಭಯ ಹೊಂದಿರುವ ವ್ಯಕ್ತಿಯಾಗಿರುವರು.

(ಹುಝೂರ್ ಹೇಳಿದರು:) ಇಂದು ಸಹ ನಾನು ದುಆದ ಕಡೆಗೆ ಗಮನಸೆಳೆಯಲು ಇಚ್ಛಿಸುತ್ತೇನೆ. ಕಳೆದ ಜುಮಾ ದಿವಸ ಅಲ್‌ಜೀರಿಯಾದ ಬಗ್ಗೆ ಹೇಳಿರಲಿಲ್ಲ. ಅಲ್ಲೂ ಅಹ್ಮದಿಯರು ತುಂಬಾ ಕಠಿಣವಾದ ಅವಸ್ಥೆಗಳನ್ನು ಅನುಭವಿಸುತ್ತಿದ್ದಾರೆ. ಕೆಲವರನ್ನು ಬಂದಿಸಲಾಗಿದೆ. ಅವರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವನ ಸ್ಥಿತಿಗಳನ್ನು ಸುಲಭಗೊಳಿಸಲಿ. ಸೆರೆಯಾಳುಗಳು ಬೇಗನೇ ಬಿಡುಗಡೆಗೊಳ್ಳುವಂತಾಗಲಿ. ಸರ್ಕಾರಕ್ಕೂ ಅಲ್ಲಾಹನು ಬುದ್ಧಿ ನೀಡಲಿ. ನ್ಯಾಯದಿಂದ ನಡೆಯುತ್ತಾ ಅಹ್ಮದಿಯರ ಹಕ್ಕುಗಳನ್ನು ಈಡೇರಿಸುವವರಾಗಲಿ. ಅದೇ ರೀತಿಯಲ್ಲಿ ಪಾಕಿಸ್ತಾನಕ್ಕಾಗಿಯೂ ದುಆ ಮಾಡಿರಿ. ಹೀಗೆಯೇ ವರ್ತಿಸಿ ಅಲ್ಲಾಹನ ಹಿಡಿತಕ್ಕೆ ಒಳಗಾಗುವುದು ಈ ಮೌಲವಿಯರ ಮತ್ತು ಆಡಳಿತಗಾರರ ವಿಧಿಯೆಂದಾದರೆ, ಅಲ್ಲಾಹನು ಬೇಗನೇ ಅವರನ್ನು ಹಿಡಿಗೂಡಲಿ ಮತ್ತು ಅಹ್ಮದಿಯರ ಕಷ್ಟತೆಗಳು ನೀಗುವಂತಾಗಲಿ – ಆಮೀನ್.

(ಖುತ್‌ಬ ಜುಮಾದ ಕೊನೆಯಲ್ಲಿ ಹುಝೂರ್ ಪಾಕಿಸ್ತಾನದ ದಿವಂಗತ ರಶೀದ್ ಅಹ್ಮದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*(atba)**

*At, Masjid Mubarak, Islamabad, Tilford, UK, On 11-12-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon